KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Exam Confidential Section
ಪರೀಕ್ಷಾ ಗೌಪ್ಯ ವಿಭಾಗ
"NAAC Accredited with "A" Grade 2022"

Pavate Nagar, Dharwad
ಪಾವಟೆನಗರ, ಧಾರವಾಡ

Fax No. 0837-2741928
Tel Ph No. 0836-2215259
Website : www.kud.ac.in

ನಂ:/ಕವಿವಿ/ಪರೀಕ್ಷಾ/ಗೌಪ್ಯ/2024/155

ದಿನಾಂಕ: 07/06/2024

## ಸುತ್ತೋಲೆ

ವಿಷಯ: ಉತ್ತೀರ್ಣ ಪ್ರಮಾಣ ಪತ್ರದ ಶುಲ್ಕ ಆಕರಿಸುವ ಕುರಿತು.
ಉಲ್ಲೇಖ:ಅಧಿಸೂಚನೆ ನಂ.ಕವಿವಿ/ಪರೀಕ್ಷಾ/ಗೌಪ್ಯ/2024/141, ದಿನಾಂಕ:04/06/2024

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಲಗ್ನ ಹಾಗೂ ಘಟಕ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಉಲ್ಲೇಖಿತ ಅಧಿಸೂಚನೆಯ ಪ್ರಕಾರ ರಾಷ್ಟ್ರೀಯ ಶಿಕ್ಷಣ ನೀತಿ 2020 (NEP) ಅಡಿಯಲ್ಲಿ ಬರುವ ಎಲ್ಲ ಸ್ನಾತಕ ಪದವಿಗಳ 2, 4 ಮತ್ತು 6 ನೇ ಸೆಮಿಸ್ಟರ್ (ರೆಗ್ಯುಲರ್/ರಿಪೀಟರ್ಸ್) ವಿದ್ಯಾರ್ಥಿಗಳಿಗೆ ಪರೀಕ್ಷಾ ಅರ್ಜಿ/ಶುಲ್ಕ ತುಂಬಲು ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಸದರ ಅಧಿಸೂಚನೆಯಲ್ಲಿ ಉತ್ತೀರ್ಣ ಪ್ರಮಾಣ ಪತ್ರದ ಶುಲ್ಕ ಆಕರಿಸಲು ಸೂಚಿಸಿರುವದಿಲ್ಲ, ಕಾರಣ, ರಾಷ್ಟ್ರೀಯ ಶಿಕ್ಷಣ ನೀತಿ 2020 ರನ್ವಯ ವಿದ್ಯಾರ್ಥಿಯು 3 ನೇ ವರ್ಷದ ಅಧ್ಯಯನವನ್ನು ಮುಂದುವರೆಸಿ ನಿಗದಿತ ಪಠ್ಯ ಕ್ರಮವನ್ನು ಅಧ್ಯಯನ ಮಾಡಿ 3 ವರ್ಷದ ಪದವಿಯೊಂದಿಗೆ ನಿರ್ಗಮಿಸಿದರೆ ಅಂತಹ ವಿದ್ಯಾರ್ಥಿಗಳಿಗೆ ಉತ್ತೀರ್ಣ ಪ್ರಮಾಣ ಪತ್ರದ ಶುಲ್ಕ ರೂ.195/- ಗಳನ್ನು ಆಕರಿಸುವುದು ಹಾಗೂ ವಿದ್ಯಾರ್ಥಿಗಳು 4 ವರ್ಷದ ಸ್ನಾತಕ ಹಾನರ್ಸ ಪದವಿಯನ್ನು ಪಡೆಯಲು ಇಚ್ಛಿಸಿ 4 ನೇ ವರ್ಷದ ಅಧ್ಯಯನವನ್ನು ಮುಂದುವರೆಸಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಉತ್ತೀರ್ಣ ಪ್ರಮಾಣ ಪತ್ರದ ಶುಲ್ಕವನ್ನು 8 ನೇ ಸೆಮಿಸ್ಟರ್‌ನ ಪರೀಕ್ಷಾ ಅರ್ಜಿ ತುಂಬುವ ಸಂದರ್ಭದಲ್ಲಿ ಆಕರಿಸಲು ತಿಳಿಸಲಾಗಿದೆ. ಸದರ ವಿದ್ಯಾರ್ಥಿಗಳಿಂದ ಸ್ವೀಕರಿಸುವ ಉತ್ತೀರ್ಣ ಪ್ರಮಾಣ ಪತ್ರದ ಶುಲ್ಕವನ್ನು SBI Collect Online ಮುಖಾಂತರ ಭರಿಸಲು ಸೂಚಿಸಲಾಗಿದೆ.

ಮುಂದುವರೆದು, 3 ನೇ ವರ್ಷದ ಪದವಿಯೊಂದಿಗೆ ನಿರ್ಗಮಿಸುವ ವಿದ್ಯಾರ್ಥಿಗಳ ಯಾದಿಯನ್ನು ಶುಲ್ಕದ ಮಾಹಿತಿಯೊಂದಿಗೆ ಪರೀಕ್ಷಾ ವಿಭಾಗಕ್ಕೆ ದಿನಾಂಕ:24/06/2024 ರ ಒಳಗಾಗಿ ಸಲ್ಲಿಸಲು ಸೂಚಿಸಲಾಗಿದೆ.

7/6

ಕುಲಸಚಿವರು(ಮೌಲ್ಯಮಾಪನ)

ಗೆ,
ಕ.ವಿ.ವಿ. ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

**ಪ್ರತಿಗಳು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:**

1) ಹಣಕಾಸು ಅಧಿಕಾರಿಗಳು, ಹಣಕಾಸು ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2) ಅಭಿವೃದ್ಧಿ ಅಧಿಕಾರಿಗಳು, ಅಂಕಿ ಸಂಖ್ಯೆ ವಿಭಾಗ/ ಶಿಷ್ಯವೇತನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3) ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ,/ಎಸ್‌ಸಿ/ಎಸ್‌ಟಿ/ಕೆ-1/ಒಬಿಸಿ ಘಟಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
4) ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ ಕ.ವಿ.ವಿ. ಧಾರವಾಡ. **(ಅಧಿಸೂಚನೆಯನ್ನು ಅಂತರ್ಜಾಲದಲ್ಲಿ ಪ್ರಕಟಿಸುವುದು.)**
5) ಆಪ್ತಕಾರ್ಯದರ್ಶಿಗಳು, ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌಲ್ಯಮಾಪನ)/ವಿತ್ತಾಧಿಕಾರಿಗಳು, ಕವಿವಿ, ಧಾರವಾಡ.
6) ಸಿಸ್ಟಮ್ ಎನಾಲಿಸ್ಟ್, ಪರೀಕ್ಷಾ ಗಣಕಯಂತ್ರ ವಿಭಾಗ, ಕ.ವಿ.ವಿ. ಧಾರವಾಡ.
7) ಉಪಕುಲಸಚಿವರು/ ಸಹಾಯಕ ಕುಲಸಚಿವರು, ಪರೀಕ್ಷಾ/ ಹಣಕಾಸು/ ವಿದ್ಯಾಮಂಡಳ ವಿಭಾಗ, ಕ ವಿ ವಿ, ಧಾರವಾಡ.
8) ಅಧೀಕ್ಷಕರು, ಹಣಕಾಸು/ ವಿದ್ಯಾಮಂಡಳ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
9) ಅಧೀಕ್ಷಕರು, ಗೌಪ್ಯ/ಪ್ರಶ್ನೆಪತ್ರಿಕೆ/ಬಿ.ಎ./ಬಿ.ಕಾಂ./ಬಿ.ಎಸ್.ಸಿ./ಕಾನೂನು/ಘಟಿಕೋತ್ಸವ ಪರೀಕ್ಷಾ ವಿಭಾಗ, ಕವಿವಿ,ಧಾರವಾಡ.